<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 105/2020**

| ಸಾಕ್ಷಿಯ ಹೆಸರು | ಶ್ರೀ. ಲೋಕೇಶ್ | ಚಾಸಾಃ | ಪ್ರಾಸಾಃ |
|---|---|---|---|
| ತಂದೆಯ ಹೆಸರು | ಶ್ರೀನಿವಾಸ್ | 2 | 2 |
| ವಯಸ್ಸು | 38 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **18.06.2026.** | |
| ಉದ್ಯೋಗ | ವ್ಯವಸಾಯ | | |
| ವಾಸ ಸ್ಥಳ | ಲಕ್ಕೊಂಡನಹಳ್ಳಿ | | |

ಮುಖ್ಯ ವಿಚಾರಣೆಃ ಪ್ರಭಾರ ಸರ್ಕಾರಿ ಅಭಿಯೋಜಕರಿಂದಃ

ಈಗ ನನಗೆ ತೋರಿಸಿದ ಮಹಜರ್ ನಲ್ಲಿ ನನ್ನ ಸಹಿ ಇದ್ದು ಅದನ್ನು ನಿಶಾನೆ.ಪಿ. 3 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 3 (ಎ) ಎಂದು ಗುರುತಿಸಲಾಯಿತು. ಈಗ್ಗೆ 7 – 8 ವರ್ಷಗಳ ಹಿಂದೆ ನಿಶಾನೆ.ಪಿ. 3 ಕ್ಕೆ ಹಾಲಪ್ಪನಹಳ್ಳಿ ಸ್ಮಶಾನದ ಬಳಿ ಮಧ್ಯಾಹ್ನದ ಸಮಯದಲ್ಲಿ ಮಾಡಿರುತ್ತೇನೆ. ನಿಶಾನೆ.ಪಿ. 3 ರ ಒಕ್ಕಣೆ ಗೊತ್ತಿಲ್ಲ.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಪ್ರಭಾರ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕ 14.06.2018 ರಂದು ಹಾಲಪ್ಪನಹಳ್ಳಿ ಗ್ರಾಮದ ಸ್ಮಶಾನದ ನೇರದಲ್ಲಿ ಹೊಸಕೋಟೆ ದೇವನಹಳ್ಳಿ NH – 207 ರಸ್ತೆಯಲ್ಲಿ ಪೊಲೀಸರು ನಮ್ಮನ್ನು ಪಂಚರಾಗಿ ಇರುವಂತೆ ಕೇಳಿದ್ದು ಸಾಕ್ಷಿ ನಾಗೇಶ್ ರವರು ಮೃತ ನಾರಾಯಣಸ್ವಾಮಿ ಆ ಸ್ಥಳದದಿಂದ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದ್ದಾಗಿ ತೋರಿಸಿದ್ದು ಅಲ್ಲಿ ಪುಟ್ ಪಾತ್ ಮೇಲೆ ನಾರಾಯಣಸ್ವಾಮಿ ಗೆ ಸೇರಿದ KA-03/EQ-7905 Activa 3g ವಾಹನವನ್ನು, ಒಂದು ಕಬ್ಬಿಣದ ಮಚ್ಚು, ಸೈಜ್ ಕಲ್ಲು, ಲೆದರ್ ಚಪ್ಪಲಿಗಳು ಇವುಗಳನ್ನು ನನ್ನ ಸಮಕ್ಷಮ ಅಮಾನತು ಪಡಿಸಿಕೊಂಡು ಸೀಲ್ ಮಾಡಿದರು ಎಂದರೆ ಸರಿ. ಈ ಬಗ್ಗೆ ಮಹರಜ್ ಅನ್ನು ಬೆಳಗ್ಗೆ 11.15

ರಿಂದ 12.15 ಮಹಜರ್ ಮಾಡಿದ್ದರು ಎಂದರೆ ಸರಿ. ನ್ಯಾಯಾಲಯದ ಮುಂದೆ ಸೀಲ್ಡ್ ಕವರಿಂದ ತೆಗೆದು ತೋರಿಸಿದ ಒಂದು ಕಬ್ಬಿಣದ ಮಚ್ಚನ್ನು ಸಾಕ್ಷಿ ಗುರುತಿಸಿದ್ದು ಮು.ಮಾ. 1 ಎಂದು ಗುರುತಿಸಲಾಯಿತು. ಸೈಜ್ ಕಲ್ಲು ಮತ್ತು ಲೆದರ್ ಚಪ್ಪಲಿಗಳನ್ನು ಸಾಕ್ಷಿ ಗುರುತಿಸಿದ್ದು ಮು.ಮಾ. 2 ಮತ್ತು 3 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಫೋಟೋ ಸದರಿ ಮೋಟಾರ್ ಸೈಕಲ್ ನ ಫೋಟೋವಾಗಿದ್ದು ಅವುಗಳನ್ನು ನಿಶಾನೆ.ಪಿ. 4 ಮತ್ತು 5 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಎಲ್ಲಾ ಆರೋಪಿತರ ಪರವಾಗಿ ಶ್ರೀ. **MNR** ವಕೀಲರಿಂದ :

ಮು.ಮಾ. 1 ರಿಂದ 3 ರ ರೀತಿ ವಸ್ತುಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ನನಗೆ ಮುದ್ದೆಮಾಲುಗಳನ್ನು ಠಾಣೆಯಲ್ಲಿ ತೋರಿಸಿದ್ದು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿ ಅಲ್ಲ. ಸ್ಮಶಾನದ ಬಳಿ ಖಾಲಿ ಹಾಳೆಗೆ ಸಹಿ ಪಡೆದುಕೊಂಡಿದ್ದು ಅದರಲ್ಲಿ ಏನು ಬರೆದಿರಲಿಲ್ಲ.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.